ಎಂಬ ಇಂಗ್ಲಿಷ್ ಪದ ಸೇರಿಸಿ ಅಲವತ್ತುಕೊಂಡಳು. "ನೀನು ಕೊಡ ಸುರೀತೀಯಾಂತ ಗೊತ್ತಿದ್ರೆ ಮನೇಲಿ ಸ್ನಾನಾನೇ ಮಾಡ್ತಾ ಇರಲಿಲ್ಲ" ಎಂದು ನಗುತ್ತ ಬಟ್ಟೆ ಹಿಂಡಿದ ಪ್ರಕಾಶ. ಅವಳಿಗೆ ಧೈರ್ಯ ಬಂತಾದರೂ ಎದುರಿಗೆ ನಿಂತವನನ್ನು ನೋಡುತ್ತ ನಾಚಿಕೆಯಿಂದ ಮುಖ ಕೆಂಪಾಯಿತು. ಕಪ್ಪು ಶಿಲೆಯಲ್ಲಿ ಕೆತ್ತಿದ ಕಟ್ಟುಮಸ್ತಾದ ವಿಗ್ರಹಕ್ಕೆ ಜೀವ ಬಂದಂತೆ ಮಂದಹಾಸ ಬೀರುತ್ತ ನಿಂತಿದ್ದನವ.

ಅಲ್ಲಿಂದಲೇ ಆರಂಭವಾಯ್ತು ನೋಡಿ ಬಾವಿಕಟ್ಟೆ ಪ್ರೇಮ. ಅವಳು ನಿತ್ಯ ನೀರು ತರಲು ಕಾಡಿನ ಬಾವಿಗೇ ಬರುವದು... ಅವನು ಕಾದು ನಿಲ್ಲುವದು... ಮಾಮೂಲಾಯ್ತು. ಪ್ರೇಮ ಮೆಲ್ಲಗೆ ಅರಳಿತು. ಇಬ್ಬರೂ ಬಾವಿಕಟ್ಟೆಯನ್ನೇ ಸುತ್ತಿದರು. ಯಾರಾದರೂ ಕಂಡರೆ ತಕ್ಷಣ ಅವರವರ ದಾರಿ ಹಿಡಿಯುತ್ತಿದ್ದರು. ಅಜ್ಜಪ್ಪಯ್ಯ ಇವರನ್ನು ನೋಡಲೇ ಇಲ್ಲವೋ ಅಥವಾ ನೋಡಿದರೂ ಹೇಳಲಿಲ್ಲವೋ ದೇವರಿಗೇ ಗೊತ್ತು. ನೆರೆ ಕೆರೆಯವರು, "ನಾಗು ಕಾಡಿನ ಬಾವಿಗೆ ಹೋಗ್ತಾಳೆ" ಎಂದು ದೇವಮ್ಮನಿಗೆ ದೂರಿತ್ತರು. ನಾಗು, "ಇಲ್ಲಿ ಶಾನೆ ಗಲಾಟೆ ಇರ್ತದೆ ಕಣವ್ವ. ನೀರೇ ಸಿಗಾಕಿಲ್ಲ. ಅಲ್ಲಿಗೆ ಹೋದರೆ ಅಜ್ಜಪ್ಪಯ್ಯ ಇರ್ತಾನೆ ಬಿಡು. ಏನೂ ಹೆದರಿಕೆ ಇಲ್ಲ" ಎಂದು ರೈಲು ಬಿಟ್ಟಿದ್ದಳು. ಆ ದೇವಮ್ಮನಿಗೋ... ಈ ಬಗ್ಗೆ ಯೋಚಿಸಲೂ ಪುರುಸೊತ್ತಿಲ್ಲ. 'ಮಗಳು ದೊಡ್ಡವಳಾಗಿದ್ದಾಳೆ. ಒಳ್ಳೇ ಸಂಬಂಧ ನೋಡಿ ಮದುವೆ ಮಾಡಬೇಕು. ಮದ್ವೆ ಅಂದ್ರೆ ಸುಮ್ಮನೆ ಆಗುತ್ತಾ... ನಾಲ್ಕು ಕಾಸು ಕೂಡಿಡಬೇಕು' ಎಂದೆಲ್ಲಾ ಚಿಂತೆ ತಲೆ ತುಂಬ. ಆದರೆ ಧಣಿಗಳು ಇದನ್ನು ನೋಡಿದ್ದಿತ್ತು. ಮೀಸೆಯಲ್ಲೇ ನಕ್ಕು ಸುಮ್ಮನಾದದ್ದಿತ್ತು. ಮದುವೆಯಾದರೂ ಅವರಿಗೆ ಲಾಭವೇ ಕಂಡಿತು. ನಾಗುವಿನಂತೆ ದುಡಿಯುವ ಹೆಣ್ಣು ಅವರಿಗೆಲ್ಲಿ ಸಿಕ್ಕಾಳು? ಸ್ಪರ್ಧೆಯಲ್ಲಿ ನಾಗು ರಂಗವಲ್ಲಿ ಬಿಡಿಸಿದರೆ ಪ್ರಕಾಶ ದೂರದಲ್ಲೇ ನಿಂತು ನೋಡಿ ಚಪ್ಪಾಳೆ ತಟ್ಟುತ್ತಿದ್ದ. ಅವಳ ನೃತ್ಯ, ನಾಟಕ ಎಲ್ಲದಕ್ಕೂ ಪ್ರಥಮ ಪ್ರೇಕ್ಷಕನಾದ. ಆಣೆ, ಭಾಷೆಗಳಾದವು... "ನಾನು ನಿನ್ನ ಬಿಟ್ಟು ಯಾರ್ನೂ ಮದ್ವೆಯಾಗಕ್ಕಿಲ್ಲ" ಎಂದಳು ನಾಗು. "ನೀನು ಸ್ಕೂಲು ಮುಗಿಸೋವಷ್ಟರಲ್ಲಿ ನಾನು ಸ್ವಲ್ಪ ದುಡ್ಡು ಮಾಡ್ಕೋತೀನಿ. ಜಮೀನು ಕೊಂಡ್ಕೋತೀನಿ. ಆಮೇಲೆ ಬಂದು ನಿನ್ನ ಮದ್ವೆ ಮಾಡ್ಕೊಡು ಅಂತ ನಿಮ್ಮಪ್ಪನ್ನ ಕೇಳ್ತೀನಿ..." ಎಂದ ಪ್ರಕಾಶ. ಬಾವಿ ಇವೆಲ್ಲವಕ್ಕೂ ಮೂಕ ಸಾಕ್ಷಿಯಾಯಿತು.

ಆದರೆ ಅವರಪ್ಪನ ಕಥೆಯೇ ಬೇರೆಯಾಗಿತ್ತು. ಕೆಮ್ಮು ಅದಾವ ಮಾಯದಲ್ಲಿ ತಗುಲಿಕೊಂಡಿತ್ತೊ... ದೇವಮ್ಮ ಕಷಾಯ ಕಾಸಿದ್ದೇ ಕಾಸಿದ್ದು. ನಾಗು ಉಪ್ಪಿನ ಕಾವು ಕೊಟ್ಟರೂ ಜಗ್ಗಲಿಲ್ಲ. ನಾಟಿ ಔಷಧಿಗೆ ಬಗ್ಗಲಿಲ್ಲ. ಸಿರವಾರದ ಡಾಕ್ಟ್ರ ಸೂಜಿಗೂ ಮಣಿಯಲಿಲ್ಲ. ಕ್ರಮೇಣ ಕಫದಲ್ಲಿ ರಕ್ತ ಬೀಳಲು ಆರಂಭವಾಯಿತು. ಗಾಬರಿಯಾದ ದೇವಮ್ಮ ತಮ್ಮ ಆಂಜನಪ್ಪನನ್ನು ಕರೆಸಿದಳು. ಮೂವರೂ ಸೇರಿ ಮೈಸೂರಿನ ದೊಡ್ಡಾಸ್ಪತ್ರೆಗೆ ಅಡ್ಮಿಟ್ ಮಾಡಿದರು. ದಿನ ಕಳೆದಂತೆ ಪರಿಸ್ಥಿತಿ ಹದಗೆಡುತ್ತಲೇ ಹೋಯಿತು. ಪ್ರಕಾಶ ಒಮ್ಮೆ ಏನೋ ನೆಪ ಮಾಡಿಕೊಂಡು ಬಂದು ನೋಡಿಕೊಂಡು ಹೋಗಿದ್ದ. ತಿಂಗಳು ಕಳೆಯುವಷ್ಟರಲ್ಲಿ ಅಂಜನಪ್ಪನ ಕೊಂಚ ದುಡ್ಡು, ದೇವಮ್ಮನ ಪುಡಿಗಾಸು, ಮೈಮೇಲಿದ್ದ ಚಿನ್ನ ಎಲ್ಲ ಹೇಳಹೆಸರಿಲ್ಲದೇ ಹೋದವು. ಮನೆಗೆ ತಿರುಗಿ ಬಂದಿದ್ದು ಅವನ ಶವವೇ. ತಾಯಿ ಮಗಳು ಬಿಕ್ಕಿದ್ದೇ ಬಿಕ್ಕಿದ್ದು. ಕಂಡ ಕನಸುಗಳೆಲ್ಲ ಹೇಳ ಹೆಸರಿಲ್ಲದಂತೆ ಹಾರಿ ಹೋಗಿದ್ದವು. ಪ್ರಕಾಶ ಕೂಡ ಕಣ್ಣೀರಾಗಿದ್ದ. ಅಂತೂ ಊರವರ ಬಾಯಲ್ಲಿ 'ಒಳ್ಳೆ ಮನಿಷ್ಯ' ಎನಿಸಿಕೊಂಡು ವೆಂಕಟಪ್ಪ ಮಣ್ಣಾಗಿದ್ದ.